

# ಆಡುವ ಬಯಕೆ ಚಂದಮಾಮಾ

ಅಂದ ಚೆಂದದ ಗೋಲೂ ಮಾಮ
ಪರೀಕ್ಷೆ ಮುಗಿಯಿತು ಅಂತೂ ಇಂತು
ಆಡಿ ಹಾರಾಡಿ , ಕುಣಿದು ಕುಪ್ಪಳಿಸೋ
ಆಸೆಯಾಯಿತು ನನಗಿಂದು

ಚಂದಮಾಮಾ ಬಲ್ಲೆಯಾ ನೀನು
ಶಾಲೆಯ ಪಾಠ ಮನೆಯ ಪಾಠ
ಓದು ಬರಹ – ಬರಹ ಓದು
ಆಗಿತ್ತು ಆಗ ನನಗದೇ ಜಗತ್ತು

ಹಾಲುಬಣ್ಣದ ಮುದ್ದಿನ ಮಾಮ
ಓದಿ ಓದಿ ಹಗಲೂ ರಾತ್ರಿ
ಬೇಸತ್ತು ನಾನು ನೋಡಲು ಹೊರಗೆ
ನೀನಿರುತಿದ್ದೆ ಜೊತೆ ಜೊತೆಯಾಗಿ

ಒಂಟಿತನವ ನೀಗಿಸೋ ಮಾಮ
ಆಡಲು ಹೋಗಲೇ ನಾ ಹೊರಗೆ ?
ಎಂದು ಕೇಳಲು ಅಮ್ಮನ ಅಪ್ಪಣೆ
ಬೇಡವೆಂದಳು ಅದು ಸರಿಯೇ?

ನನ್ನ ಮಾತನು ಆಲಿಸೋ ಮಾಮ
ಅಮ್ಮನು ಏಕೆ ಬೇಡವೆಂದಳು
ಕಾರಣ ಕೇಳಲು ಹೇಳಿದಳವಳು
ಹೊರಗುರಿಯುತಿದೆ ಬಿರು ಬಿಸಿಲು !

ತಂಪು ತಂಪಿನ ಚಂದಮಾಮಾ
ನಿನ್ನಲ್ಲೊಂದು ಮನವಿ ನನ್ನದು
ನಿನ್ನದೇ ಜಗದ ಸೂರ್ಯದೇವನಿಗೆ
ಹೇಳುವೆಯಾ ಉರಿ ತಗ್ಗಿಸು ಎಂದು?

ನನ್ನ ನಲ್ಮೆಯ ಚಂದಮಾಮಾ
ವರ್ಷಕ್ಕೊಮ್ಮೆ ಮನಸೋ ಇಚ್ಛೆ
ಆಡುವ ಬಯಕೆಯ ತೀರಿಸು ಬೇಗ
ಉಂಡೆ ಚಕ್ಕುಲಿ ಕೊಡುವೆನು ಆಗ

**-ಲತಾ ಹೆಗಡೆ, ಹುಬ್ಬಳ್ಳಿ**

# ದುರಾಶೆ ದುಃಖಕ್ಕೆ ಕಾರಣ



ಕ್ಲಿಷ್ಟವಾದ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ತೆನಾಲಿ ರಾಮಕೃಷ್ಣನು ಎತ್ತಿದ ಕೈ. ಒಂದು ಸಾರಿ ಒಬ್ಬ ಎಣ್ಣೆ ವ್ಯಾಪಾರಿಗೂ ಮತ್ತು ಮಿಠಾಯಿ ಅಂಗಡಿಯವನಿಗೂ ದೊಡ್ಡ ತಗಾದೆ ಉಂಟಾಯಿತು. ಇಬ್ಬರೂ ಬಹಳ ಹೊತ್ತು ವಾದೋಪವಾದ ಮಾಡಿಕೊಂಡರೂ ಸಮಸ್ಯೆ ಪರಿಹಾರವಾಗಲಿಲ್ಲ. ಇಬ್ಬರೂ ತೆನಾಲಿ ರಾಮಕೃಷ್ಣನ ಹತ್ತಿರಕ್ಕೆ ಹೋದರು.

ತೆನಾಲಿ ರಾಮಕೃಷ್ಣ ಆ ಇಬ್ಬರನ್ನೂ ಸಮಾಧಾನಪಡಿಸಿ, 'ಅಸಲು ಸಂಗತಿ ಏನು?' ಎಂದು ಕೇಳಿದ.

ಆಗ ಮಿಠಾಯಿ ಅಂಗಡಿಯವನು, 'ಅಂಗಡಿಯಲ್ಲಿ ಮಿಠಾಯಿ ಮಾರುತ್ತಿದ್ದಾಗ ಈ ಎಣ್ಣೆ ವ್ಯಾಪಾರಿ ನನ್ನ ಹತ್ತಿರಕ್ಕೆ ಬಂದು 'ಎಣ್ಣೆ ಬೇಕಾ?' ಎಂದು ಕೇಳಿದನು. ನಾನು ಬೇಕೆಂದು ಹೇಳಿ ಪಾತ್ರೆಯನ್ನು ತೆಗೆದುಕೊಂಡು ಬರಲು ಅಂಗಡಿ ಒಳಗೆ ಹೋದ ಕೂಡಲೇ ಕಪಾಟಿನಲ್ಲಿದ್ದ ನನ್ನ ಬಂಗಾರದ ನಾಣ್ಯಗಳಿದ್ದ ಚೀಲವನ್ನು ತೆಗೆದುಕೊಂಡು ಓಡಿ ಹೋದ. ನನ್ನ ಹಣದ ಚೀಲ ನನಗೆ ವಾಪಸ್ಸು ಕೊಡಿಸಿರಿ' ಎಂದು ದೂರು ನೀಡಿದನು.

ಆಗ ಎಣ್ಣೆ ವ್ಯಾಪಾರಿ 'ಇಲ್ಲ ಇಲ್ಲ, ಈತನು ಸುಳ್ಳು ಹೇಳುತ್ತಿದ್ದಾನೆ. ಆ ಚೀಲ ನನ್ನದೇ. ಆತನ ಅಂಗಡಿಯಲ್ಲಿ ಮಿಠಾಯಿ ಕೊಂಡು ಹಣ ನೀಡಲು ಚೀಲದಲ್ಲಿದ್ದ ಹಣವನ್ನು ಎಣಿಸುತ್ತಿದ್ದೆ. ಈತನು ದುರಾಶೆಯಿಂದ ಆ ಚೀಲದಲ್ಲಿರುವ ಹಣ ತನ್ನದೆಂದು ಸುಳ್ಳು ಹೇಳುತ್ತಿದ್ದಾನೆ. ನೀವೇ ದಯಮಾಡಿ ನ್ಯಾಯ ದೊರಕಿಸಿಕೊಡಿ' ಎಂದು ಬೇಡಿಕೊಂಡ.

ಈ ಇಬ್ಬರೂ ತಮ್ಮ ತಮ್ಮ ವಾದವನ್ನು ಪದೇ ಪದೇ ಹೇಳುತ್ತಿರುವುದರಿಂದ, ತೆನಾಲಿ ಈ ಸಮಸ್ಯೆ ಹೇಗೆ ಪರಿಹರಿಸಬೇಕೆಂದು ಆಲೋಚಿಸಿದನು. ಸ್ವಲ್ಪ ಸಮಯದ ನಂತರ ಒಂದು ದೊಡ್ಡ ಪಾತ್ರೆಯ ತುಂಬಾ ನೀರನ್ನು ತರಿಸಿಕೊಂಡು, ಆ ಚೀಲದಲ್ಲಿನ ಬಂಗಾರದ ನಾಣ್ಯಗಳನ್ನು ಪಾತ್ರೆಯೊಳಗಿನ ನೀರಿನಲ್ಲಿ ಹಾಕಿದನು. ಕ್ಷಣದಲ್ಲೇ ಆ ನಾಣ್ಯಗಳಿಗೆ ಅಂಟಿಕೊಂಡಿದ್ದ ಎಣ್ಣೆ ನೀರಿನಲ್ಲಿ ಬೆರೆತು ನೀರಿನ ಮೇಲೆ ತೇಲಿತು. ಇದರಿಂದ ಆ ನಾಣ್ಯದ ಚೀಲ ಎಣ್ಣೆಯ ವ್ಯಾಪಾರಿಯದೇ ಎಂದು ತೆನಾಲಿಯಲ್ಲದೇ ಅಲ್ಲಿದ್ದವರೆಲ್ಲಾ ಗ್ರಹಿಸಿದರು. ಎಣ್ಣೆ ವ್ಯಾಪಾರಿಗೆ ಆ ನಾಣ್ಯದ ಚೀಲ ವಾಪಸ್ಸು ಕೊಡಿಸಿ, ಮಿಠಾಯಿ ಅಂಗಡಿಯವನಿಗೆ ಕಠಿಣ ಶಿಕ್ಷೆ ವಿಧಿಸಿದ ತೆನಾಲಿ.

**-ಎಂ.ಬಿ.ರಂಗಪ್ಪ ಶೆಟ್ಟಿ ಮೋಕಾ**